**ದಿನಾಂಕಃ 06.02.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- ಶ್ರೀ ಆರ್ ಎಸ್ . ಆರೋಪಿ ಪರ ವಕೀಲರಿಂದ .**

ಶಿವಾಜಿ ಮಿಲ್ಟ್ರಿ ಹೋಟೆಲ್ ಯಾರ ಮಾಲೀಕತ್ವಕ್ಕೆ ಸೇರಿರುತ್ತದೆ ಎಂದು ನೀವು ದಾಖಲೆ ನೋಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಸದರಿ ಹೋಟೆಲ್ ಗೆ ದಾಳಿ ಮಾಡಿದಾಗ ಯಾರಾದರೂ ಗ್ರಾಹಕರು ಹೋಟೆಲ್ ನಲ್ಲಿ ಮದ್ಯ ಸೇವನೆ ಮಾಡುತ್ತಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪಂಚದಾರರಿಗೆ ನೋಟೀಸನ್ನು ಎಲ್ಲಿ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಹೋಟೆಲ್ ಮುಂಭಾಗದಲ್ಲಿ ಎಂದು ನುಡಿಯುತ್ತಾರೆ. ಆರೋಪಿ ಹಾಗೂ ಸದರಿ ಶಿವಾಜಿ ಮಿಲ್ಟ್ರಿ ಹೋಟೆಲ್ ನ ಮಾಲೀಕರಿಗೆ ಏನು ಸಂಬಂಧ ಎಂದು ನೀವು ದಾಖಲೆ ಪರಿಶೀಲಿಸಿರುತ್ತೀರಾ ಎಂದರೆ ಸಾಕ್ಷಿ ತನಿಖಾಧಿಕಾರಿಗಳು ಮಾಡುತ್ತಾರೆ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಹೋಟೆಲ್ ನಂಬರ್, ವಿಸ್ತೀರ್ಣ ಮತ್ತು ಕೋಣೆಗಳ ಬಗ್ಗೆ ಬರೆದಿರುತ್ತೀರಾ ಎಂದರೆ ಸಾಕ್ಷಿ ಹೋಟೆಲ್ ನಂಬರ್ ಮತ್ತು ವಿಸ್ತೀರ್ಣದ ಬಗ್ಗೆ ಬರೆದಿರುವುದಿಲ್ಲ ಆದರೆ ಕೋಣೆಗಳ ಬಗ್ಗೆ ಬರೆದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಬಿಳಿ ಬಣ್ಣದ ಪ್ಲಾಸ್ಟಿಕ್ ? ಚೀಲವನ್ನು ನಿಮ್ಮ ಸಮಕ್ಷಮ ಅಮಾನತು ಪಡಿಸಿಕೊಂಡಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಪ್ಲಾಸ್ಟಿಕ್ ?ಚೀಲ ನ್ಯಾಯಾಲಯದ ಮುಂದೆ ಇದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಜಪ್ತಿ ಪಡಿಸಿಕೊಂಡ ಮದ್ಯದ ಟೆಟ್ರಾ ಪ್ಯಾಕುಗಳನ್ನು ಎಲ್ಲಿಂದ

ತಂದಿರುತ್ತಾರೆ ಎಂದು ಬರವಣಿಗೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮಂದುವರೆದು ತನಿಖಾಧಿಕಾರಿಗಳು ಮಾಡುತ್ತಾರೆ ಎಂದು ನುಡಿಯುತ್ತಾರೆ. ಟೆಟ್ರಾ ಪ್ಯಾಕುಗಳ ಬ್ಯಾಚ್ ?ನಂಬರ್ ಅನ್ನು ಮಹಜರ್ ನಲ್ಲಿ ನಮೂದಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಲೇಬಲ್ ನಂಬರ್ ಅನ್ನು ನಾಶಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಲೇಬಲ್ ನಂಬರ್ ಅನ್ನು ನಾಶಪಡಿಸಿರುತ್ತಾರೆ ಎಂದು ಮಹಜರ್ ನಲ್ಲಿ ನಮೂದಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಗ್ರಾಮಪಂಚಾಯ್ತಿ ಚುನಾವಣೆ ಇದ್ದಿದ್ದರಿಂದ ನಿಮ್ಮ ಇಲಾಖೆಯ ಅಂಕಿಅಂಶಕ್ಕೋಸ್ಕರ ನೀವು ಯಾವುದೇ ದಾಳಿಯನ್ನು ಮಾಡದೆ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಳ್ಳದೆ ಠಾಣೆಯಲ್ಲೇ ಎಲ್ಲಾ ಸೃಷ್ಟಿಸಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಶಿವಾಜಿ ಹೋಟೆಲ್ ಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಹಾಗೂ ಆರೋಪಿಯು ಸದರಿ ಹೋಟೆಲ್ ?ನಲ್ಲಿ ಇದ್ದಿರಲಿಲ್ಲ ಎಂದರೆ ಸಾಕ್ಷಿ ಇದ್ದರು ಎಂದು ನುಡಿಯುತ್ತಾರೆ. ಸದರಿ ಹೋಟೆಲ್ ನ ಅಕ್ಕ ಪಕ್ಕ ಮನೆಗಳು ಮತ್ತು ಅಂಗಡಿಗಳು ಇವೆಯೆ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ನೀವು ದಾಳಿ ಮಾಡಿದ ಸಮಯದಲ್ಲಿ ಅಂಗಡಿಗಳು ಓಪನ್ ಇತ್ತೆ ಎಂದರೆ ಸಾಕ್ಷಿ ಓಪನ್ ಇತ್ತು ಎಂದು ನುಡಿಯುತ್ತಾರೆ. ಸದರಿ ಅಕ್ಕಪಕ್ಕ ಅಂಗಡಿಯವರನ್ನು ಮಹಜರ್ ಮಾಡುವ ಸಮಯದಲ್ಲಿ ಕರೆದಿದ್ದಿರ ಎಂದರೆ ಸಾಕ್ಷಿ ಕರೆದಿದ್ದೆವು ಎಂದು ನುಡಿಯುತ್ತಾರೆ. ನೀವು ಯಾವುದೇ ದಾಳಿ ಮಾಡಿರುವುದಿಲ್ಲ ಹಾಗೂ ಯಾವುದೇ ಅಬಕಾರಿ ಸೀಲನ್ನು ಮತ್ತು ಜಪ್ತಿಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಟೆಟ್ರಾ ಪ್ಯಾಕುಗಳು ನಿಮ್ಮ ಇಲಾಖೆಗೆ ಸೇರಿದ್ದು ಅವುಗಳನ್ನು ಈ ಪ್ರಕರಣಕ್ಕೋಸ್ಕರ ಸೇರಿಸಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರನ್ನು ನೀವು ಸ್ಥಳದಲ್ಲೇ ಬರೆದಿರುವುದಿಲ್ಲ , ಠಾಣೆಯಲ್ಲಿ ಬರೆದು ಅದಕ್ಕೆ ಪಂಚರ ಸಹಿಯನ್ನು ಸಹ

ಠಾಣೆಯಲ್ಲೆ ಪಡೆದಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಅದೇ ರೀತಿ ನೀವು ಪಂಪಚರನ್ನು ಕರೆದಿರುವುದಿಲ್ಲ ಹಾಗೂ ಅಂಗಶೋಧನೆಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಹಾಜರು ಪಡಿಸಿರುವ ಎಲ್ಲಾ ದಾಖಲೆಗಳನ್ನು ಪ್ರಕರಣಕ್ಕೋಸ್ಕರ ನಿಮ್ಮ ಠಾಣೆಯಲ್ಲೆ ತಯಾರಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಹಾಜರು ಪಡಿಸಿರುವ ಟೆಟ್ರಾ ಪ್ಯಾಕುಗಳಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಿನದಂದು ನಿಮ್ಮ ವಾಹನದ ಚಾಲಕರು ಯಾರು ಇದ್ದರು ಎಂದರೆ ಸಾಕ್ಷಿ ಸ್ವಾಮಿ ಎಂದು ನುಡಿಯುತ್ತಾರೆ. ಸದರಿಯವರ ಸಹಿಯನ್ನು ಮಹರಜ್ ಗೆ ಪಡೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ವಾಹನವು ಸದರಿ ದಿನದಂದು ಯಾವುದೇ ಗಸ್ತು ಮಾಡುತ್ತಿದ್ದಿರಲಿಲ್ಲ ಹಾಗೂ ಸದರಿ ಸ್ವಾಮಿಯವರು ವಾಹನವನ್ನು ಅಲ್ಲಿಗೆ ತಂದಿದ್ದಿರಲಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಎಲ್ಲಾ ಪಂಚರ ರುಜುಗಳನ್ನು ಕಛೇರಿಯಲ್ಲೆ ಪಡೆದಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಸ್ಥಳದಲ್ಲೆ ಪಡೆದಿರುತ್ತೇವೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**